ಓ.ಎಸ್.ನಂ.**193/2016**

ಡಿಡಬ್ಲ್ಯೂ .**1**

ಪ್ರಮಾಣ ವಚನ ಬೋಧಿಸಿದ ದಿನಾಂಕಃ **09.09.2025.**
ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.

**ಪಾಟೀ ಸವಾಲುಃ 10ನೇ ಪ್ರತಿವಾದಿ ಪರ ಶ್ರೀ ವಕೀಲರಿಂದ**

ನಾನು **8**ನೇ ತರಗತಿಯ ತನಕ ಓದಿದ್ದೇನೆ. **1**ನೇ ಪ್ರತಿವಾದಿ ನನ್ನ ತಾಯಿ**,** **2**ನೇ ಪ್ರತಿವಾದಿ ನನ್ನ ಅಕ್ಕ**,** **4** ಮತ್ತು **5**ನೇ ಪ್ರತಿವಾದಿ ನನ್ನ ತಮ್ಮಂದಿರು. **6** ರಿಂದ **9**ನೇ ಪ್ರತಿವಾದಿಗಳು ನನಗೆ ಗೊತ್ತಿಲ್ಲ. ನಾವು **20** ಗುಂಟೆಯನ್ನು **2001–02**ರಲ್ಲಿ **11**ನೇ ಪ್ರತಿವಾದಿಗೆ ಮಾರಾಟ ಮಾಡಿದ್ದೇವೆ. ಸದರಿ ಕ್ರಯಪತ್ರಕ್ಕೆ ನಾನು**,** ನನ್ನ ತಾಯಿ**,** ನನ್ನ ಅಕ್ಕ ಮತ್ತು ತಮ್ಮಂದಿರು ಸಹಿ ಮಾಡಿದ್ದೇವೆ ಎಂದರೆ ಸರಿ. ದಾವಾ ಆಸ್ತಿಯ ಹಳೆ ಸರ್ವೆ ನಂ.**60** ಹೊಸ ಸರ್ವೆ ನಂ.**120.** ಈಗ ಸರ್ವೆ ನಂ.**120** ಪೋಡಿಯಾಗಿ **120/1** ಮತ್ತು **120/2** ಆಗಿದೆ ಎಂದರೆ ಗೊತ್ತಿಲ್ಲ. ಸರ್ವೆ ನಂ.**60**ರಲ್ಲಿ ಒಟ್ಟು ಎಷ್ಟು ವಿಸ್ತೀರ್ಣ ಇತ್ತು ಎಂದರೆ ನನಗೆ ಗೊತ್ತಿಲ್ಲ. ಅದು ಮೊದಲು ಲಕ್ಕೆನಹಳ್ಳಿ ಗಂಗಪ್ಪನವರಿಗೆ ಸೇರಿತ್ತು ಎಂದರೆ ಸರಿ. ಸದರಿ ಆಸ್ತಿ ಗಂಗಪ್ಪನವರಿಗೆ ಹೇಗೆ ಬಂದು ಎಂದರೆ ಗೊತ್ತಿಲ್ಲ. ದೊಡ್ಡಪಿಳ್ಳಯ್ಯನವರಿಗೆ ದಿನಾಂಕ **13.07.1959**ರಂದು **30** ಗುಂಟೆ ಮಾರಾಟವಾಗಿದೆ ಎಂದರೆ ಸರಿ. ಅದೇ ರೀತಿ ಗಂಗಪ್ಪನವರು **1** ಎಕರೆ **20** ಗುಂಟೆ ಪಾಪಣ್ಣನವರಿಗೆ ದಿನಾಂಕ **08.04.1968**ರಲ್ಲಿ ಮಾರಾಟ ಮಾಡಿದ್ದಾರೆ ಎಂದರೆ ಗೊತ್ತಿಲ್ಲ. ನಂತರ ಪಾಪಣ್ಣನವರು ಸದರಿ **1** ಎಕರೆ **20** ಗುಂಟೆಯನ್ನು ದಿನಾಂಕ **25.02.1996**ರಂದು **9**ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಂತರ **9**ನೇ ಪ್ರತಿವಾದಿಯೂ ಸದರಿ **1** ಎಕರೆ **20** ಗುಂಟೆಯನ್ನು ದಿನಾಂಕ **22.02.2006**ರಂದು **10**ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಾತನಿಗೆ ಮುತ್ತಾಯ್ಯ**,** ಗಂಗದರಯ್ಯ**,** ನಾರಾಯಣಪ್ಪ ಮತ್ತು ಗುರ್ರಪ್ಪ ಎಂಬ ನಾಲ್ಕು ಜನ ಮಕ್ಕಳಿದ್ದಾರೆ ಎಂದರೆ ಸರಿ. ಸದರಿ **4** ಜನ ಅಣ್ಣ–ತಮ್ಮಂದಿರು ದಿನಾಂಕ

**23.03.1970**ರಲ್ಲಿ ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ಗೊತ್ತಿಲ್ಲ. ಸದರಿ ವಿಭಾಗದಲ್ಲಿ ಸರ್ವೆ ನಂ.**60**ರಲ್ಲಿ **15** ಗುಂಟೆ ನನ್ನ ತಂದೆಯ ಭಾಗಕ್ಕೆ ಬಂತು ಎಂದರೆ ಸರಿ. ಅದೇ ವಿಭಾಗದಲ್ಲಿ **15** ಗುಂಟೆಯೂ ನಾರಾಯಣಪ್ಪನ ಭಾಗಕ್ಕೆ ಹೋಗಿತ್ತು ಎಂದರೆ ಗೊತ್ತಿಲ್ಲ. ನಾರಾಯಣಪ್ಪನವರು ದಿನಾಂಕ **03.04.1978**ರಂದು **18** ಗುಂಟೆಯನ್ನು ನನ್ನ ತಂದೆಗೆ ಮಾರಾಟ ಮಾಡಿದ್ದಾರೆ ಎಂದರೆ ಗೊತ್ತಿಲ್ಲ.

ದಾವಾ ಆಸ್ತಿಯಲ್ಲಿ ಖರಾಬು ಜಮೀನು ಇದೆಯಾ ಎಂದರೆ ಗೊತ್ತಿಲ್ಲ. ಮೂಲ ಸರ್ವೆ ನಂ.**60**ರಲ್ಲಿ ಒಟ್ಟು **30** ಗುಂಟೆ ಖರಾಬು ಜಮೀನು ಇದೆ ಎಂದರೆ ಸಾಕ್ಷಿಯೂ ಈ ರೀತಿ ಹೇಳುತ್ತಿದ್ದರು ಆದರೆ ನನಗೆ ಗೊತ್ತಿಲ್ಲ. ಸರ್ವೆ ನಂ.**60**ರಲ್ಲಿ ಮುತ್ತಾಯ್ಯನವರಿಗೆ ಭಾಗ ಹೋಗಿತ್ತಾ ಎಂದರೆ ಗೊತ್ತಿಲ್ಲ. ವಾದಿಯರು ದಿನಾಂಕ **25.08.1970**ರಲ್ಲಿ **15** ಗುಂಟೆಯನ್ನು ಮುನಿಹನುಮಕ್ಕನವರಿಗೆ ಮಾರಾಟ ಮಾಡಿರುವ ವಿಚಾರ ಗೊತ್ತಾ ಎಂದರೆ ಇಲ್ಲ. ವಾದಿಯರು ಗೊತ್ತಾ ಎಂದರೆ ಸಾಕ್ಷಿಯೂ ಈ ಕೇಸು ಹಾಕಿದ ನಂತರವೇ ಅವರ ಬಗ್ಗೆ ತಿಳಿಯಿತು ಎಂದು ಹೇಳುತ್ತಾರೆ. ವಾದಿಯರು ಯಾವ ಉದ್ದೇಶಕ್ಕಾಗಿ ಈ ದಾವೆ ಹಾಕಿದ್ದಾರೆ ಎಂದರೆ ಗೊತ್ತಿಲ್ಲ. ನಾನು **11**ನೇ ಪ್ರತಿವಾಯರಿಗೆ ಮಾರಾಟ ಮಾಡಿದ **15** ಗುಂಟೆ ಜಮೀನು ವಾದಿಯರಿಗೆ ಸೇರಿದ್ದು, ಎಂದು ಹೇಳುತ್ತಿದ್ದಾರೆ ಎಂದರೆ ಸರಿಯಲ್ಲ. ಅದಕ್ಕಾಗಿ ಅವರು ಈ ಕೇಸು ಹಾಕಿದ್ದಾರೆ ಎಂದರೆ ಸರಿಯಲ್ಲ. ನಮಗೆ **15** ಗುಂಟೆ ಭಾಗಕ್ಕೆ ಬಂದಿದ್ದು, ಅದರಲ್ಲಿ **25** ಗುಂಟೆ ಮಾರಾಟ ಮಾಡಲು ಹಕ್ಕು ಇರಲಿಲ್ಲ ಎಂದು ವಾದಿಯರು ಹೇಳುತ್ತಿದ್ದಾರೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇರುವುದಿಲ್ಲ.</u>

(ನನ್ನ ಉಕ್ತಲೇಖಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ದೊಡ್ಡಬಳ್ಳಾಪುರ.